ಈ) ಸ್ವಾಯತ್ತತೆಗೆ ಅನೇಕ ಜನ ಒತ್ತಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ರಮೇಶ್ (ಯುವಜನ ಸೇವೆ ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಸರ್ಕಾರದ ಮಟ್ಟದಲ್ಲಿ ತೀವ್ರ ಪರಿಶೀಲನೆಯಲ್ಲಿದೆ.

ಆ)ಆದಷ್ಟು ಶೀಘ್ರವಾಗಿ ನೇಮಿಸಲಾಗುವುದು.

ಇ) ಸ್ವಾಯತ್ತತೆಯನ್ನು ಈಗಾಗಲೇ ಕೊಡಲಾಗಿದೆ.

ಈ) ಉದ್ಭವಿಸುವುದಿಲ್ಲ.

**ಕೆ.ಆರ್.ಎಸ್. ನೀರಿನ ಬಗ್ಗೆ**

2278 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ-

ಅ) ಕಳೆದ 5 ವರ್ಷಗಳಿಂದ ಕೆ.ಆರ್.ಎಸ್. ಅಣೆಕಟ್ಟೆಯಿಂದ ತಮಿಳುನಾಡಿಗೆ ಬಿಟ್ಟಿರುವ ನೀರಿನ ಪ್ರಮಾಣವೆಷ್ಟು? (ಸರಾಸರಿ ಮಾಹೆಯಾನ ನೀರಿನ ಪ್ರಮಾಣವೆಷ್ಟು)

ಆ) ರಾಜ್ಯದ ಕಾವೇರಿ ಕೊಳ್ಳದ ವಿವಿಧ ಜಲಾಶಯಗಳಲ್ಲಿರುವ ನೀರಿನ ಶೇಖರಣಾ ಸಾಮರ್ಥ್ಯವೆಷ್ಟು?

ಇ) ಕಾವೇರಿ ಕೊಳ್ಳದ ವಿವಿಧ ಯೋಜನೆಗಳಡಿ ನೀರಾವರಿಗೊಳಪಟ್ಟ ಜಮೀನಿನ ವಿಸ್ತೀರ್ಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) 1986-87 ರಿಂದ 1990-91 ರವರೆಗೆ ಕೃಷ್ಣರಾಜಸಾಗರದಿಂದ ಬಿಡುಗಡೆ ಮಾಡಿದ ನೀರಿನ ಪ್ರಮಾಣ 158.70 ಟಿ.ಎಂ.ಸಿ. ಇದೇ ಅವಧಿಯಲ್ಲಿ ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ತಲುಪಿರುವ ನೀರಿನ ಪ್ರಮಾಣ 785.90 ಟಿ.ಎಂ.ಸಿ.

ಆ) 132.58 ಟಿ.ಎಂ.ಸಿ.

ಇ) 3,58,590 ಹೆಕ್ಟೇರುಗಳು (1-4-91ರವರೆಗೆ)

**ನೀರಾವರಿ ಯೋಜನೆಗಳು**

2282 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ-

ಅ) ರಾಜ್ಯದ ಪೂರ್ಣಗೊಂಡಿರುವ ಮತ್ತು ಹಾಲಿ ಕೆಲಸ ನಡೆಯುತ್ತಿರುವ ಕಾಮಗಾರಿಗಳು ಮಧ್ಯಮದಲ್ಲಿ ಹಾಗೂ ಭಾರಿ ನೀರಾವರಿ ಯೋಜನೆಗಳಲ್ಲಿ ಮುಗಿದಾಗ ಶೇಕಡಾ ಎಷ್ಟು ಭೂಮಿಯು ನೀರಾವರಿಗೆ ಒಳಪಡಿಸಿದಂತಾಗುತ್ತದೆ?

ಆ) ಯಾವ ಯಾವ ನದಿಗಳಿಂದ ಎಷ್ಟೆಷ್ಟು ನೀರನ್ನು ಉಪಯೋಗಿಸಕೊಂಡಂತಾಗುತ್ತದೆ?

ಇ) ಎಲ್ಲಾ ಕಾಮಗಾರಿಗಳನ್ನು ಎಷ್ಟು ವರ್ಷಗಳಲ್ಲಿ ಮುಗಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)